ಸಿ. ಆನಂದಪ್ಪ, ಬೆಂಗಳೂರು
ಶಿವನ ದೇಗುಲಗಳಲ್ಲಿ ಶಿವನೆದುರು ನಂದಿಯ ವಿಗ್ರಹ ಇರುವ ಉದ್ದೇಶವೇನು?



ಭಕ್ತ ಕೂಗಿದ ತಕ್ಷಣ ಹೊರಡಲು ವೆಹಿಕಲ್ ಹೊರಗೇ ಇರಲೆಂಬ ಮುಂದಾಲೋಚನೆ.

ಬಿ. ಚಂದ್ರೇಗೌಡ, ಬೆಂಗಳೂರು
ಬದುಕಿನ ತಾಳ ತಪ್ಪುವುದಕ್ಕೂ, ಸಂಗೀತದ ತಾಳ ತಪ್ಪುವುದಕ್ಕೂ ಏನು ವ್ಯತ್ಯಾಸ?
ಸಂಗೀತದ್ದನ್ನು ಸರಿಪಡಿಸಲು ಹಿಂದುವರಿಯಬೇಕು; ಬದುಕಿನದನ್ನು ಸರಿಪಡಿಸಲು ಮುಂದುವರಿಯಬೇಕು.

ಶ್ರುತಿ ರಿಗ್ರೆಟ್ ಐಯ್ಯರ್, ಬೆಂಗಳೂರು
ವಧುವರಾನ್ವೇಷಣೆಯಲ್ಲಿ ವರನ ಮನೆಯಲ್ಲಿ ರಾಹು– ಕೇತು, ಮುರಿದ ಕುರ್ಚಿಗಳು ಇವೆಯೇ ಎಂದೇಕೆ ಕೇಳುತ್ತಾರೆ?
ರಾಹು– ಕೇತುವಿಗೇ ಶನಿಯಾಗುವ, ಕುರ್ಚಿಗೆ ಗೆದ್ದಲಾಗುವ ಸ್ವಭಾವ ಇರುವುದರಿಂದ.

ವಿ.ಎಂ. ಮೇಗೂರ, ಧಾರವಾಡ
ಶನಿದೇವನ ಕಾಗೆಗೂ, ಶಕುನಿಯ ರಣಹದ್ದಿಗೂ ಏನು ವ್ಯತ್ಯಾಸ?



ರಣಹದ್ದಿಗೆ ಕಾರ್ಯಸಾಧನೆಯ ವಿಷಯದಲ್ಲಿ ತನ್ನ ಮಾಲಿಕನಂತೆಯೇ ಅಪಾರ ತಾಳ್ಮೆ.

ಕಣ್ಣೂರು ವಿ. ಗೋವಿಂದಾಚಾರಿ, ಮೈಸೂರು
ಮನೆಯನ್ನು ಗೃಹ ಎನ್ನುತ್ತಾರೆ. ಜೈಲನ್ನು ಕಾರಾಗೃಹ ಎನ್ನುವುದೇಕೆ?
ಅಲ್ಲಿರುವವರೆಲ್ಲ ಮನಸ್ಸನ್ನು ಕಾರ ಮಾಡಿಕೊಂಡವರೇ ಆಗಿರುವುದರಿಂದ!

ಎಂ.ಎಸ್. ಗುರುರಾಜಾಚಾರು, ಬಳ್ಳಾರಿ
ತಾಳಿ ಗಟ್ಟಿಯಾಗಿರಲು ಮೂರು ಗಂಟು. ರಾಜಕೀಯ ಪಕ್ಷ ಗಟ್ಟಿಯಾಗಿರಲು?
ಕನಿಷ್ಠ ಮೂರು ತಲೆಮಾರಿಗಾಗುವಷ್ಟು ಗಂಟು.

ವ. ಉಮೇಶ ಕಾರಂತ, ಮಂಗಳೂರು
ಅನ್ನಬ್ರಹ್ಮನ ಮುಂದೆ ಯಾರಿಹರು?
ತಂಬುಳಿ, ಹುಳಿ, ಸಾಂಬಾರು, ಸಾರುಗಳ ಸರಸ್ವತಿ.

ನರಸಿಂಹ ಪೈ, ಕಾಸರಕೋಡ
ಇಳೆಗೂ ಮಹಿಳೆಗೂ ವ್ಯತ್ಯಾಸವೇನು?
ಇಳೆ ಸುತ್ತಾಡುವುದನ್ನು ನಿಲ್ಲಿಸುವಂತಿಲ್ಲ.

ಮುಕುಂದ ಹೆರಕಲ್ಲ, ಬೆಂಗಳೂರು
ಕನ್ನಡದ ಸುದ್ದಿವಾಹಿನಿಗಳ ಶ್ರೇಷ್ಠ ವಾಚಕ– ವಾಚಕಿಯರಿಗೆ ಪ್ರಶಸ್ತಿ ಕೊಡುವಂತಿದ್ದರೆ ಮೊದಲ ಬಹುಮಾನ ಯಾರಿಗೆ?
ಚಂದನವೇ. ಮಿಕ್ಕೆಲ್ಲ ವಾಹಿನಿಗಳು ಕೊಡುವುದು ಸುದ್ದಿಯಲ್ಲ, ಸದ್ದು.

ಎಂ.ಬಿ. ಕೃಷ್ಣಮೂರ್ತಿ, ಚಾಮರಾಜನಗರ
ಬಡವರನ್ನು ಬಡತನ ಕಿತ್ತು ತಿನ್ನುತ್ತದೆ. ಶ್ರೀಮಂತರನ್ನು?
ಕಳ್ಳರ/ಕಂದಾಯದವರ ರೈಡ್‌ನ ಭೀತಿ ಕುಟುಕುತ್ತಿರುತ್ತದೆ.

ಟಿ.ಎಂ. ಮಾನಪ್ಪ, ಶಿವಮೊಗ್ಗ
ಮುಪ್ಪಿಗೂ ಉಪ್ಪಿಗೂ ವ್ಯತ್ಯಾಸವೇನು?
ಉಪ್ಪು ಕ್ಷಾರ; ಮುಪ್ಪು ಖಾರ.

ವಿ.ಎಸ್. ಮಾಧವ ಶಾನಭಾಗ, ಕುಂದಾಪುರ
ನೆಲ, ಅನಿಲ, ಅನಲ, ಸಲಿಲ, ಮುಗಿಲ ಫಲ ಭಾಗ್ಯವು ಸಬಲರಿಗೆ ಮಾತ್ರ ಸಿಗಲು ಕಾರಣ?
ಅದಕ್ಕೆ ಬೇಕಾದ ಛಲ, ಬಲ, ದಲ, ಮೂಲ ಇರುವುದರಿಂದ.

ಜೆ.ಜಿ.ಹಳ್ಳಿ ಚಿದಾನಂದ, ಹಿರಿಯೂರು
ಹುಡುಗಿಯರು ಕಾಲೇಜು ಓದುವಾಗಲೇ ಕಾಲು ಜಾರಿ ಬೀಳುತ್ತಾರಲ್ಲ?
'ನೈಸ್ ರೋಡ್'ನಲ್ಲಿ ಕರೆದೊಯ್ಯುವ ಹುಡುಗರ ಕೈಚಳಕವೇ ಕಾರಣವಂತೆ.

ಚೆನ್ನವೀರ ನಾಲ್ವಾಡ, ಚಿಕ್ಕೇನಕೊಪ್ಪ
ಮುಂಬರುವ ದಿನಗಳು ಭೀಕರವಾಗಿವೆ ಎಂದು ಹೆದರಿಸುತ್ತಿದ್ದಾರಲ್ಲಾ...?
ಗುಡ್. ಮೆಡಿಕಲ್ ಇನ್ಸೂರೆನ್ಸ್ ಏಜೆಂಟರು ಇರಬೇಕಾದ್ದೇ ಹಾಗೆ.

## ವಾರದ ಪ್ರಶ್ನೆ

ಎಂ.ಎಸ್. ಗುರುರಾಜಾಚಾರು, ಬಳ್ಳಾರಿ
ಗೆಟ್ ಟುಗೆದರ್‌ಗೂ, ಲಿವಿಂಗ್ ಟುಗೆದರ್‌ಗೂ ವ್ಯತ್ಯಾಸವೇನು?
ಅದು ಸಂಘ ಜೀವನ; ಇದು ಸಂಗ ಜೀವನ.

ಮಹಾವೀರ ಕಾಸರ, ಶಿವಮೊಗ್ಗ
ಹೆಂಡ ಕುಡಿದ ನಂತರ ಹಾಕಿದ ಮತಗಳೆಲ್ಲ ಅಮಾನ್ಯವಲ್ಲವೆ?
ಅಂತಹ ಮತಗಳಿಂದ ಆಯ್ಕೆಗೊಂಡವರು ಅಮಾನ್ಯರೇ ಆದ್ದರಿಂದ ಮ್ಯಾಚಿಂಗ್ ಆಗುವುದಂತೆ.

ಬಸವಾಪುರ ರಾಮಕೃಷ್ಣಾರೆಡ್ಡಿ, ಬೆಂಗಳೂರು
ಭೂಮಿಯಿಂದ ಎಲ್ಲಾ ಸಿಗುತ್ತದೆ. ಆಕಾಶದಿಂದ ಏನು ಸಿಗುತ್ತದೆ?
'ಮೇಘದೂತಂ'ನಂತಹ ಕಾವ್ಯಕ್ಕೆ ಸ್ಫೂರ್ತಿ.

ರಮೇಶ ಜ. ಬೊಂಗಾಳೆ, ಬೈಲಹೊಂಗಲ
ಉರುಳುವವನಿಗೆ ರೋಗ ಹೆಚ್ಚು; ಹಾಡುವವನಿಗೆ ರಾಗ ಹೆಚ್ಚು; ಓದುವವನಿಗೆ?



ಪ್ರಯೋಗ ಹೆಚ್ಚು.

ಮೋಹನರಾಜು ಎಸ್.ಎ. ಶಂಕರಘಟ್ಟ
ತಾಯಿಯ ಮಡಿಲು ಮಮತೆಯ ಕಡಲು. ಮಡದಿಯ ಮಡಿಲು?
ಸಾಂಗತ್ಯದ ಸಾಗರ, ಅರ್ಥವಾಗದ Riddleಉ.

ತಲಕಾಡು ಶ್ರೀನಿಧಿ, ಬೆಂಗಳೂರು
ತಮ್ಮ ನಿವೇಶನದ ತುದಿಯವರೆಗೆ ಮನೆ ಕಟ್ಟಿಕೊಂಡು ಅದರಾಚೆಗೆ ಗಿಡ ಬೆಳೆಸುವ ಪರಿಸಹಸ್ನೇಹಿಗಳಿಗೆ ಏನೆನ್ನುತ್ತೀರಿ?
ಅದು ಪರಿಸರಸ್ನೇಹವಲ್ಲ, ಅನ್ಯರು ಕಸವನ್ನೋ, ಬೈಕನ್ನೋ ಅಲ್ಲಿ ಇರಿಸದಿರಲು ಮಾಡುವ (ಕು)ಯುಕ್ತಿ.

■ ರಾಮ್

ಪ್ರಶ್ನೆ ಕಳುಹಿಸಲು: editorsu@sudha.co.in